................
ವಿಧಿ, ವಿಧಿ ವಿಧಿ ವಿಧಿ, ಹೊರಗು ಒಳಗು ನಾಲ್ಕೂ ಬದಿ
ಅಡಿಗಡಿಗೂ ಕಾಯುತಿಹುದು ನೆಳಲಿನಂತೆ ಓಡಿಸಿ,
ಮರೆಯೊಳಗಿಂದ ಬರುವ ವ್ಯಾಧ, 'ಮಾ
ನಿಷಾದ, ಮಾ ನಿಷಾದ'
ವೆಂದರೇನು ಉರುಳದಿಹುದೆ ಚೆಲ್ಲಾಡುವ ಪಕ್ಷಿ

ಗೌರೀಶ್ ಕಾಯ್ಕಿಣಿಯವರ ಮಾಹಿತಿಯನ್ನು ಒಪ್ಪುವುದಾದರೂ ಚಿತ್ತಾಲರಿಗೆ ಈ ಎರಡು ನುಡಿಗಳು ಪರಸ್ಪರ ವಿರುದ್ಧವಾದ ನಂಬುಗೆಗಳನ್ನು ಮಂಡಿಸುತ್ತವೆ ಎನ್ನುವ ಅರಿವು ಇದ್ದಿರಲೇಬೇಕು. ಎರಡನೆಯ ನುಡಿಯ ಒಂದೆರಡು ಸಾಲುಗಳು ತನ್ನ ವಿಧಾತ ತಾನೇ ಎಂದು ನಂಬಿದ್ದು– ಮುಗ್ಧ ನಂಬಿಕೆಯಾಗಿದ್ದು– ಈಗ ದುರಂತಮಯ ಅನುಭವಗಳ ಆಘಾತದಲ್ಲಿ ಎಲ್ಲವೂ ವಿಧಿಗೆ ಅಧೀನವಾಗಿದೆ ಎಂದು ಮನುಷ್ಯ ಹೇಳುತ್ತಿದ್ದಾನೆ. ಇದು ಕವಿಯ ನಂಬಿಕೆಯಲ್ಲಿಯೇ ಆದ ಆಮೂಲಾಗ್ರ ಬದಲಾವಣೆ ಎಂದು ಹೇಳಲಾಗದು. ಮೊದಲ ನುಡಿಯಲ್ಲಿರುವ ನಂಬಿಕೆಯಲ್ಲಿ ಸ್ವಲ್ಪ ಪ್ರಮಾಣದ ಅಪ್ರಬುದ್ಧತೆ ಇದೆ ಅಥವಾ ಮುಗ್ಧತೆ ಇದೆ ಎನ್ನುವುದು ಭಾಷೆಯ ಬಳಕೆಯಲ್ಲಿ ಗೊತ್ತಾಗುತ್ತದೆ. ಹೀಗಾಗಿ ನನಗೆ ಈ ಪದ್ಯವು ಮಾನವವಾದಿ ನಂಬಿಕೆಯ ತಿರಸ್ಕಾರವಲ್ಲ; ಬದಲಾಗಿ, ಆ ನಂಬಿಕೆಯನ್ನು ಪ್ರಶ್ನಿಸಲು ಒತ್ತಾಯಿಸುವ ಅಸ್ತಿತ್ವದ ವಾಸ್ತವಗಳ ಬಗ್ಗೆ ಇದೆ ಅನ್ನಿಸಿತು.

'ದುಃಖಗೀತೆ'ಯೂ ಸೇರಿದಂತೆ ಅನೇಕ ಪದ್ಯಗಳಲ್ಲಿ ಒಂದು ಚಲನೆಯು ಖಂಡಿತವಾಗಿ ಇದೆ. ಮನುಷ್ಯನ ಸ್ವಾಯತ್ತತೆ, ಕರ್ತೃತ್ವದ ಸೀಮಿತತೆ ಹಾಗೂ ಸವಾಲುಗಳ ಬಗ್ಗೆ ಗಾಢವಾದ ಎಚ್ಚರವಿದೆ. ಪ್ರಬುದ್ಧವಾದ ತಾತ್ವಿಕತೆಯ ಶಕ್ತಿಯುಳ್ಳ ಕವಿಯು ಮಾಡಲೇಬೇಕಾದ ಪ್ರಯಾಣವಿದಾಗಿದೆ.

'ನೀರು–ನೆಲ' ಪದ್ಯದಲ್ಲಿ ಸಮುದ್ರದ ಅಗಾಧವಾದ ಹರಹು ಮತ್ತು ಆಳವನ್ನು ಧೇನಿಸುತ್ತ ಕವಿ ಹೇಳುತ್ತಾರೆ:

ಈ ದೀರ್ಘ ಈ ಹ್ರಸ್ವ–
ಇದು ಉಸಿರಾಡಿಪ ವಿಶ್ವ
ಆಳ ಆಳ ಆಳ
ಗಂಟಲೊಡೆದು ಕೂಗಿದರೂ ಮರುದನಿ ಏಳದ
ಆಳ
ಇಲ್ಲೆಲ್ಲಿಂದಲೋ ಎದ್ದಿತು ನಮ್ಮಯ ನಾಭಿಯ
ಆಳ
ಈ ಬಲ ಮಾರ್ಮಲೆದೆದ್ದರೆ ನಾವಿದಕೇತರ
ಭಾರ?

ಈ ಸಾಗರವು ಪ್ರತಿಮಿಸುವ ಶಕ್ತಿ ಅನೂಹ್ಯವಾಗಿದೆ. ಅದು ನಮ್ಮನ್ನು ಕ್ಷಣಮಾತ್ರದಲ್ಲಿ ನಾಶ ಮಾಡಬಲ್ಲದು. ಆದರೆ ಮಾನವನೆನ್ನುವ ಜೀವಿಯು ಎಲ್ಲ ಎಲ್ಲೆಗಳನ್ನು ಮೀರುತ ತನ್ನ ಜಗತ್ತನ್ನು ಪ್ರತಿ ನಿರ್ಮಿಸಿಕೊಂಡಿದ್ದಾನೆ. ತನ್ನದೇ ದಾರಿಯನ್ನು ರೂಪಿಸಿಕೊಂಡಿದ್ದಾನೆ, ಹೀಗಾಗಿ,

ಇದು ವಿಶ್ವ
ಇದು ವಿಧಿ, ನಾವೆ ವಿಧಾತರು
ಇದು ತಾಯಿ, ನಾವ್ ತಾತರು
ನಿರ್ಮಿತರು, ನಿರ್ಮಾತರು
ಅರ್ಭಕರಾಗಿಯೂ ಜನಕರು
ಈ ವಿಶ್ವವು ಇರಬಹುದು ನಾವು ಇಲ್ಲಿ ಇರುವನಕ
ಬಾಳಿನ ಈ ಬಂಗಾರದ ಕಣಸಿನಲ್ಲಿ ಬೆಳೆವನಕ

ಮೇಲಿನ ಕವಿತೆಯಲ್ಲಿ ಮೊಕಾಶಿಯವರು ಹೇಳುವ ಪ್ರಖರ ಮಾನವವಾದವಿದೆ. ಆದರೆ ಈ ನಂಬಿಕೆ ವಿಶ್ವದ ಅಗಾಧ ನಿಗೂಢ ಶಕ್ತಿಯನ್ನು ಅಲ್ಲಗಳೆಯುವುದಿಲ್ಲ. ತನ್ನ ಮಗನ ಬಗ್ಗೆ ಬರೆದಿರುವ ಪದ್ಯದಲ್ಲಿ ('ಉದಯನನ್ನು ಕುರಿತು') ಮಗನಿಗೆ, 'ಮನುವಂಶವಿಲ್ಲಿ ಕಟ್ಟಿತು ನಿರಂತರ ತನ್ನ/ ಧೀರಯ್ಯ ಕರ್ಮಕಥೆ, ಇದಕೆ ವಾರಸು ನೀನು' ಎಂದು ಹೇಳುತ್ತಾರೆ. ಇಷ್ಟಾದರೂ ಮಾನವ ಅಸ್ತಿತ್ವದ ಎಲ್ಲೆಗಳ ಬಗ್ಗೆ ಕವಿ ಎಚ್ಚರಿಕೆಯನ್ನೂ ನೀಡುತ್ತಾರೆ.

ಇದು ಜೀವರಾಶಿಯನು ಎದೆಗಿರಿಸಿಕೊಂಡಿರುವ
ತಾಯಿ ಕಂದಾ! ತನ್ನ ಮೈಯ ಮಣ್ಣಿಂದಲೇ
ನಮ್ಮ ಕಣ್ಣನ್ನು ತೆರೆಸಿ ಮಣ್ಣಿಗೇ ಮತ್ತೆ
ಕರೆಯಿಸಿಕೊಳ್ಳುವ ಅನಿವಾರ್ಯ, ಅನೂಹ್ಯ
ವಿಧಿಮಾಯಿ
ಏಸು ಗೂಢಗಳನ್ನು ಒಡೆದರೂ ಇನ್ನೀಸು
ಗೂಢಗಳನ್ನೊಡ್ಡಿ ದಿಙ್ಮೂಢಗೊಳಿಪ ಗಂಭೀರೆ